ಕಪ್ಪಿನಲ್ಲಿ, ಕಾಲ್ದಾರಿಯಲ್ಲಿ, ಫಕ್ಕನೆ ಹಾವು ಅಡ್ಡ ಬರುವುದು ಮಲೆನಾಡಿಗರಿಗೆ ಹೊಸ ಸಂಗತಿಯೇನಲ್ಲ. ಆ ಮಟ್ಟಿನ ಎಚ್ಚರ ಇದ್ದೇ ಇರುತ್ತದೆ, ಕೊನೇಪಕ್ಷ ಸುಪ್ತ ಪ್ರಜ್ಞೆಯಲ್ಲಾದರೂ. ಬೆಳಗಾದರೆ ಗೌರಿ, ಗಣೇಶನ ಹಬ್ಬ. ಆ ವರ್ಷ ಅಮ್ಮ, ಮಗ ಒಟ್ಟಿಗೆ ಭೂಲೋಕಕ್ಕೆ ಭೇಟಿ ಕೊಡುವವರಿದ್ದರು. ಅಮ್ಮ ಮಡಿಯುಟ್ಟು ಕೂತು ದೊಡ್ಡ ಕೌಳಿಗೆಯಲ್ಲಿ ಕಡುಬಿನ ಹಿಟ್ಟು ಅರೆದಿಟ್ಟಿದ್ದಳು. ಮನೆಯವರಿಗೆ ಮಾತ್ರವಲ್ಲದೆ ಕೆಲಸದಾಳುಗಳಿಗೆ, ವೇಷ ಕಟ್ಟಿಕೊಂಡು ತಿರುಗಲು ಬರುವವರಿಗೆ, ಹಬ್ಬದ ದಿನ ಕೊಟ್ಟೆ ಕಡುಬಿನ ಜೊತೆ ಒಂದು ತೆಂಗಿನಕಾಯಿ ಇಟ್ಟು ಕೊಡುವುದು ಪದ್ಧತಿ. ಕೈಲೊಂದು ಕತ್ತಿ ಹಿಡಿದು, ಅಗಲಗಲದ, ಸೀಳು ಬಿಟ್ಟಿರದ ಬಾಳೆಲೆ ಹುಡುಕುತ್ತಾ ತೋಟದ ತಗ್ಗಿಗೆ ಇಳಿದಿದ್ದ ಅಪ್ಪನಿಗೆ ಕಾಲಬುಡಕ್ಕಿಂತ ಹೆಚ್ಚಿನ ಧ್ಯಾಸ ಬಾಳೆಗಿಡಗಳ ಮೇಲಿತ್ತೇನೋ. ದಿನಾ ಎನ್ನುವಂತೆ ನೋಡುವ ಹಾಂವು, ಹರಣೆಗಳೆಂದರೆ ಸಸಾರ. ಅವಷ್ಟಕ್ಕೆ ಅವು, ನಮ್ಮಷ್ಟಕ್ಕೆ ನಾವು ಎನ್ನುವ ಧೋರಣೆ. ಕಾಲ್ದಾರಿ ಬಿಟ್ಟು ಒಳಗೊಳಗಿದ್ದ ಗಿಡಗಳಿಂದ ಬಾಳೆ ಎಲೆ ಕುಯ್ಯಲು ಹೋಗಿದ್ದಾನೆ. ಅಡಿಕೆ ತೋಟದಲ್ಲಿ ವರ್ಷಾವಧಿಯ ಬೇಸಾಯ ಮಾಡಿಸಿ, ಸೊಪ್ಪು ಹೊಚ್ಚಿದ್ದ ಮರದ ಬುಡಗಳಲ್ಲಿ ಎಲೆಯುದುರಿಸಿಕೊಂಡ ಜಿಗ್ಗುಗಳು, ಮಳೆಗೆ ಕೊಳೆತು ಜಾರಿಸುವ ಎಲೆಗಳು. ಕಾಣದೆ ಮೈಮೇಲೇ ಕಾಲಿಟ್ಟಿರಬೇಕು, ಎಂತದೋ ಚುಚ್ಚಿದ ಹಾಗಾಗಿ ನೋಡಿದರೆ ಸರಸರಸರ ಜಿಗ್ಗಿನ ಮರೆಯಲ್ಲಿ ಹರಿದು ಹೋದ ಹಾವು ಕಣ್ಣಿಗೆ ಬಿದ್ದು ಜೀವ ಬಾಯಿಗೆ ಬಂತು.

ಒಂದೇ ಹಾರಿಗೆ ಮನೆ ಸೇರಿಕೊಳ್ಳೋಣವೆಂದರೆ ಅಷ್ಟು ಸಲೀಸಾ? ಮಳೆಯ ದೆಸೆಯಿಂದ ಜಾರುವ ನೆಲ, ಕೊಚ್ಚೆ. ಹೀಗೆ ಜಾರುತ್ತದೆಯೆಂದೇ ಮಳೆಗಾಲದ ದಿನಗಳಲ್ಲಿ ಕಾಲಿಗೆ ಎಕ್ಕಡ ಹಾಕದೆ ಬರಿಗಾಲಲ್ಲಿ ನಡೆದು ಅಭ್ಯಾಸ. ಕೆಸರಿದ್ದಲ್ಲಿ ಕಾಣದೆ ಕಾಲಿಟ್ಟರೆ ಮೆಟ್ಟಿನ ಸಮೇತ ಕಾಲು ಹೂತುಕೊಂಡು, ಕಾಲೆತ್ತಿದರೆ ಮೆಟ್ಟು ಒಳಗೇ ಉಳಿದುಕೊಂಡು ಬರಿಗಾಲು ಮಾತ್ರ ಹೊರಗೆ ಬರುತ್ತಿತ್ತು. ಏಳುವುದು, ಬೀಳುವುದು ಲೆಕ್ಕಿಸದೆ ಅಪ್ಪ ಓಡೋಡಿಕೊಂಡು ಮನೆಗೆ ಬಂದಾಗ ಹತ್ತು ವರ್ಷದ ಅಣ್ಣ, ಎಂಟು ವರ್ಷದ ತಮ್ಮ ಮುಂಚೇಕಡೆಯಲ್ಲಿ ಪಟ ಬಿಚ್ಚಿಕೊಂಡು ಹಾವು, ಏಣಿ ಆಟ ಆಡುತ್ತಿದ್ದರು. ಆಗಷ್ಟೇ ಇಸ್ಕೂಲು ಮುಗಿಸಿ ಮನೆಗೆ ಬಂದು, ಬೆಂಬೂದಿಯಲ್ಲಿ ಬೆಚ್ಚಗಿಟ್ಟಿದ್ದ ಕಾಫಿ ಕೌಳಿಗೆಯಿಂದ ಇಬ್ಬರಿಗೂ ಒಂದೊಂದು ಲೋಟ ಕಾಫಿ ಬಗ್ಗಿಸಿಕೊಟ್ಟಿದ್ದಳು ಅಮ್ಮ. ಆಗಲೇ ಅನ್ನದ ತಪ್ಪಲೆ ಒಲೆ ಏರಿತ್ತು. ಒಲೆಯೊಳಗೆ ಸೌದೆ ಸೀಳುಗಳು ಉರಿಯುತ್ತಿದ್ದುವು. ಕಣ್ಣಿಗೆ ಕತ್ತಲಾಗುವುದರೊಳಗೆ ರಾತ್ರಿಯ ಊಟ ಮುಗಿಸುವುದು ಆ ಮನೆಯ ಅಭ್ಯಾಸ.

ಮರುದಿನ ಹಬ್ಬದ ರಜ ಇದ್ದದ್ದರಿಂದ ಮಕ್ಕಳಿಗೆ ಹುರುಪು ಮೈದುಂಬಿ ಕೊಂಡಂತಾಗಿತ್ತು. ಎರಡು ದಿನ ಓದು, ಬರಕ್ಕೆ ಪೂರ್ಣ ವಿರಾಮ. ಗೊಚ್ಚೆಗುಂಡಿಯಂತಾಗಿದ್ದ ಅಂಗಳಕ್ಕಿಳಿಯದೆ ಅಣ್ಣ, ತಮ್ಮ ಹಾವು, ಏಣಿಯ ಆಟ ಶುರು ಮಾಡಿಕೊಂಡಿದ್ದರು. ಎಂತಾ ವಿಪರ್ಯಾಸ. ಮುಗ್ಧ ಬಾಲಕರನ್ನು ಹಾವು ಸರ್ರನೆ ಪಾತಾಳಕ್ಕೆ ಜಾರಿಸುತ್ತಿರುವ ಪರಿವೆ ಆ ಹೊತ್ತಿನಲ್ಲಿ ಅವರಿಗಿರಲಿಲ್ಲ ಮತ್ತು ಅದೇ ಹೊತ್ತಿನಲ್ಲಿ ಅಪ್ಪ ಹಾವಿನ ಹಲ್ಲಿಗೆ ಸಿಕ್ಕಿ ಬಿದ್ದಿದ್ದ. ಊರಿಗೆ ಉಪದೇಶ ಹೇಳುವ ತಾಕತ್ತಿದ್ದವನು ಅಪ್ಪ, ಹಾಗೆಂದು ಅಮ್ಮನ ಬಾಯಿಂದ ಕೇಳಿದ್ದು. ಮನೆಯ ಸೂರು ದಾಟಿ ಬರಬಾರದು ಎನ್ನುವ ಪ್ರಜ್ಞೆ ಅವನಲ್ಲಿ ಯಾಕೆ ತಲೆ ಮರೆಸಿಕೊಂಡಿತೋ ಪರಮಾತ್ಮ ಬಲ್ಲ. ಕೊನೆಗಾಲ ಬಂದಾಗ ಬುದ್ಧಿ ಕ್ಷೀಣಿಸಿ ಹೋಗುತ್ತದೆಯೇನೋ? ಅಥವಾ ಅಂತಾದ್ದೊಂದು ನಂಬಿಕೆ ಕೂಡಾ ಭ್ರಮೆ ಇರಬಹುದು. ಒಟ್ಟಿನಲ್ಲಿ ಅಪ್ಪ ಕಟ್ಟಿಕೊಂಡು ತಂದಿದ್ದ ಬುತ್ತಿ ಮುಗಿದಿತ್ತು.

ಹಾಂವು ಕಣೇ, ಹಾಂವು ಕಚ್ತು ಕಣೇ.. ಹೊಸಿಲು ದಾಟಿ ಒಳಗೆ ಬಂದವನು ಧೊಪ್ಪನೆ ನೆಲಕ್ಕೆ ಕೆಡೆದು ಬಿದ್ದಿದ್ದ. ಬಾಯಲ್ಲಿ ಬುರುಗು ಉಕ್ಕಕ್ಕಿ ಬರತೊಡಗಿತ್ತು. ಮೈ ಬಣ್ಣ ಕಪ್ಪಿಗೆ ತಿರುಗಿತ್ತು. ವಿಷಸರ್ಪಗಳಲ್ಲೂ ಇಂತಿಷ್ಟು ಗಳಿಗೆಯ ಹಾವುಗಳು ಎನ್ನುವ ಪ್ರಬೇಧ ಇರುತ್ತದೆಯಂತೆ. ಅವು ಕಚ್ಚಿದರೆ ಇಂತಿಷ್ಟು ಗಳಿಗೆಯ ಒಳಗೆ ತಕ್ಕ ಪರಿಹಾರೋಪಾಯ ಕೈಗೊಳ್ಳದಿದ್ದರೆ ಸಾವು ಖಂಡಿತವಂತೆ.

ಅಮ್ಮಾ.. ಎಂದು ಗಾಬರಿ ಬಿದ್ದು ಮಕ್ಕಳು ಕರೆದರೆ ಎಲ್ಲಿದ್ದಾಳೆ ಅಮ್ಮ? ಕೊಟ್ಟಿಗೆಯಲ್ಲಿ ಯಾವುದೋ ದನದ ಕಾಲಬುಡದಲ್ಲಿ ಕೂತು ಹಾಲು ಕರೆಯುತ್ತಾ, ಹಾಲು ಹಾಲಾಹಲವಾಗುವ ಅರಿವೇ ಇಲ್ಲದೆ ಕಾಲು ಕುಣಿಸುತ್ತಿದ್ದ ದನಕ್ಕೆ ಗದರುತ್ತಿದ್ದಳು ಅಮ್ಮ.

'ನಿನ್ನ ಹೊಟ್ಟೆ ಒಡಿಯ. ಒಂದು ಗಳಿಗೆ ಸುಮ್ನೆ ನಿಲ್ಲೋಕಾಗಲ್ಲನೇ? ಕೈ ತಪ್ಪಿ ಹಾಲು ಚೆಲ್ತು ಅಂದ್ರೆ ಜಕಣಿ ಬಿಡಿಸ್ಬೀನಿ ನಿಂಗೆ.. '

'ಅಮ್ಮಾ ಓಡ್ಬಾರೇ, ಅಪ್ಪಂಗೆ ಹಾವು ಕಚ್ತಂತೆ ಕಣೇ..' ಬೊಬ್ಬಿರಿಯುತ್ತಾ ಅಮ್ಮನನ್ನು ಹುಡುಕಿಕೊಂಡು ಬಂದ ಮಕ್ಕಳ ಹಿಂಬಾಲಿಸಿಕೊಂಡು ಓಡೋಡಿ ಬಂದ ಅಮ್ಮ ಅಪ್ಪನ ಬಳಿ ಕುಸಿದು ಕೂರುವಾಗ ಎಲ್ಲಾ ಮುಗಿಯುವ ಹಂತಕ್ಕೆ ಬಂದಿತ್ತು. ಸುಮ್ಮನೆ ನೋಡುತ್ತಾ ಕೈಕಟ್ಟಿ ಕೂರಲಿಲ್ಲ ಅಮ್ಮ. ಹಾವಿನ ವಿಷಕ್ಕೆ ಮದ್ದು ಮಾಡುವ ಗೋಪಾಲಯ್ಯನ ಮನೆಗೆ ಹಿರಿ ಮಗನನ್ನು ಓಡಿಸಿ, ಎಡವಿ ಬಿದ್ದರೆ ಸಿಗುತ್ತದೆಯೆನ್ನುವಷ್ಟು ಹತ್ತಿರದಲ್ಲಿರುತ್ತವೆಯೇ ಹಳ್ಳಿ ಮನೆಗಳು? ಗೋಪಾಲಯ್ಯ ಬರುವಷ್ಟರಲ್ಲಿ ಎಲ್ಲಾ ಮುಗಿದು ಹೋಗಿತ್ತು.

* * *

ಇದು ಹೀಗ್ಗೀಗೇ ಆಗಿದ್ದು ಎಂಬುದನ್ನು ಅಮ್ಮ, ಮಕ್ಕಳು ನಂತರದ ದಿನಗಳಲ್ಲಿ ಕೂತು ಮಾತಾಡುವಾಗ ಅಂದಾಜು ಮಾಡಿದ್ದು ಮತ್ತು ಅದು ಹಾಗೇ ನಡೆದಿದೆ ಕೂಡಾ ಎಂದು ಈಗ ನೆನಪು ಮಾಡಿಕೊಂಡರೂ ಅನಿಸುತ್ತದೆ ರಾಮಚಂದ್ರನಿಗೆ. ಗಟ್ಟಿಗಿತ್ತಿ ಅಮ್ಮ. ಅಳುತ್ತಾ, ಕರೆಯುತ್ತಾ ಮೂಲೆ ಸೇರಿ ಕೂತುಕೊಳ್ಳಲಿಲ್ಲ. ತಾನೇ ಕೈಕಾಲುಗೆಟ್ಟರೆ ಮಕ್ಕಳು ನಿಜವಾದ ಅರ್ಥದಲ್ಲಿ ತಬ್ಬಲಿಗಳಾಗಿ ಬಿಡುತ್ತಾರೆ ಎಂದು ಅವಳ ಅಂತರ್ಯ ಬಲ್ಲುದು.


'ಇಷ್ಟು ದಿನ ಋಣ ಇತ್ತು, ಮುಗೀತು. ಹೋದೋರ ಹಿಂದೆ ಇದ್ದೋರು ಹೋಗೋಕಾಗುತ್ತಾ? ಇರುವಷ್ಟು ದಿನ ಗಾಡಿ ಎಳೀಬೇಕಲ್ಲ?' ಎನ್ನುತ್ತೆನ್ನುತ್ತಾ ಸೆರಗು ಸೊಂಟಕ್ಕೆ ಕಟ್ಟಿದಳು. ಮುಕ್ಕುತ್ತಾ ಎನ್ನುವಂತಾದರೂ ಸರಿ, ಗಾಡಿ ಸಾಗತೊಡಗಿತು, ಕ್ರಮೇಣ ಸುಗಮವಾಗಿಯೇ. ತಾವು ಅಣ್ಣ ತಮ್ಮಂದಿರನ್ನು ಸಾಕಿ ದೊಡ್ಡ ಮಾಡಲು ಅಮ್ಮ ಎಷ್ಟು ಪಾಡು ಪಟ್ಟಿದ್ದಾಳೆ ಎಂದು ರಾಮಚಂದ್ರನಿಗೆ ಗೊತ್ತುಂಟು. ಮನೆಯ ಎನ್ನುವುದಕ್ಕಿಂತ ಅಡುಗೆಮನೆಯ ನಾಲ್ಕು ಗೋಡೆಗಳ ನಡುವೆ ಸಾಕಿದ ಬೆಕ್ಕಿನಂತೆ ಬೆಚ್ಚಗೆ ಬದುಕು ಮಾಡುತ್ತಿದ್ದ ಅಮ್ಮ ಏಕಾಏಕಿ ಬೀದಿಗೆ ಬಿದ್ದಂತಾಗಿದ್ದಳು. ಆದರೂ ಧೃತಿಗೆಡದೆ ಮೈ ಕೊಡವಿಕೊಂಡು ಮೇಲೆದ್ದು ಬದುಕಿಗೆ ಸಡ್ಡು ಹೊಡೆದು ನಿಂತಿದ್ದಳು. ಶಿವಮೊಗ್ಗ ಪೇಟೆ ಯಾವ ದಿಕ್ಕಿಗಿದೆ ಎಂದು ಕೂಡಾ ಗೊತ್ತಿಲ್ಲದವಳು ಅಣ್ಣ ರಘುರಾಮನನ್ನು ಬೆನ್ನಿಗಿಟ್ಟುಕೊಂಡು ಬಸ್ಸು ಹತ್ತಿ ಹೋಗಿ ಅಡಿಕೆಮಂಡಿಯ ವ್ಯವಹಾರ ಮಾಡಿಕೊಂಡು ಬರುವಷ್ಟು ಪರಿಣಿತೆಯಾಗಿದ್ದಳು. ಮನೆಯ ಕಡೆ ಕಾಲಕಾಲಕ್ಕೆ ಮಾಡಿಸ ಬೇಕಾದ ಬೇಸಾಯದ ಕೆಲಸಗಳ ಬಗ್ಗೆ ಅವಳಿಗೆ ಹೇಳಿಕೊಡಬೇಕಾದ್ದಿರಲಿಲ್ಲ. ಈಗಿನ ಹಾಗೆ ಆಳುಗಳು ಕೆಲಸಕ್ಕೆ ಸಿಗುವುದಿಲ್ಲ ಎಂದು ಮೈ ಪರಚಿಕೊಳ್ಳಬೇಕಾದ ಕಾಲ ಆಗಿರಲಿಲ್ಲ. ಅವಳ ಮೇಲ್ವಿಚಾರಣೆಯಲ್ಲಿ ಎಲ್ಲಾ ಸುಖಮಯವಾಗಿ ನಡೆಯತೊಡಗಿತ್ತು. 'ಪರ್ವಾಗಿಲ್ಲ ಮಾರಾಯ್ತಿ ನೀನು. ನಮ್ಮಂತೋರಾಗಿದ್ರೆ..' ಎನ್ನುತ್ತಾ ಅರ್ಧೋಕ್ತಿಯಲ್ಲಿ ನಿಲ್ಲಿಸಿ ಅಮ್ಮನ ಕಡೆ ಮೆಚ್ಚುಗೆಯಿಂದಲೋ, ಕುಹಕತನದಿಂದಲೋ ನೋಡುವ ಸರೀಕ ಹೆಂಗಸರನ್ನು ಕಂಡರೆ ಮೂಗು ಮುರಿಯುತ್ತಿದ್ದಳು ಅಮ್ಮ.

ನಿನ್ನೈಲಾಗಲ್ಲ, ನಿನ್ನೈಲಾಗಲ್ಲ ಅಂತ ಹೇಳಿ ಹೇಳಿಯೇ ನಮ್ಮನ್ನ ಮೂಲೇಲಿ ಕೂರಿಸಿಬಿಟ್ಟಿರ್ತಾರೆ. ಗಂಡಸ್ರಿಗೆ ಆಗುತ್ತಂತೆ, ನಮಗ್ಯಾಕೆ ಆಗಲ್ಲ? ಹೆದರಿ ಹಿಂದಕ್ಕೆ ಸರಿಯೋದನ್ನ ಮೊದ್ಲು ಬಿಡ್ಬೇಕು. ಎಲ್ಲಾ ತನ್ನಿಂತಾನೇ ಆಗುತ್ತೆ.. ಅಮ್ಮ ನಿಜಕ್ಕೂ ಹೀಗೆ ನಂಬಿಕೊಂಡಿದ್ದಳಾ ಅಥವಾ ಹೀಗೆ ಹೇಳಹೇಳುತ್ತಾ ತನ್ನನ್ನೇ

## ಲೋಪ

ಅರವತ್ತು
ಆದ ಮೇಲೆ
ಹೇಗಿದ್ದರೇನು ಸೃಷ್ಟಿ
ನೋಡಲು
ಇರುವುದಿಲ್ಲ ದೃಷ್ಟಿ
ಬಂದರೇನು ಶ್ರಾವಣ
ಇರುವುದಿಲ್ಲ ಶ್ರವಣ

★ ಗೀತಾ ಶಾಸ್ತ್ರಿ


ಈಶ್ವರ